ಅಧ್ಯಕ್ಷರು: ಒಳ್ಳೆಯದಾಗಲಿ ನಿಮಗೆ.

ವಿಷಯ: ಬಾಗೇಪಲ್ಲಿ ತಾಲ್ಲೂಕಿನ ಗುಮ್ಮನಾಯಕನಹಳ್ಳಿಯನ್ನು ಪ್ರವಾಸಿ ಕೇಂದ್ರವನ್ನಾಗಿ ಅಭಿವೃದ್ಧಿ ಪಡಿಸುವುದು.

512 (4177)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಮಾನ್ಯ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾಗೇಪಲ್ಲಿ ತಾಲ್ಲೂಕಿನ ಈ ಹಿಂದಿನ ತಾಲ್ಲೂಕು ಕೇಂದ್ರವಾದ ಗುಮ್ಮನಾಯಕನಹಳ್ಳಿ ಎಂಬುದು ಇದ್ದುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಗುಮ್ಮನಾಯಕನ ಹಳ್ಳಿಯಲ್ಲಿ ಈಗಲೂ ಹಳೆಯ ಕಲೆ ವೈಭವಗಳಿಂದ ಕೂಡಿದ ಕೋಟೆ ಕೊತ್ತಲುಗಳು ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಇ) ಬಂದಿದ್ದಲ್ಲಿ ಈ ಸ್ಥಳವನ್ನು ಪ್ರವಾಸಿ ಕೇಂದ್ರ ಮಾಡುವ ಉದ್ದೇಶ ಸರ್ಕಾರಕ್ಕಿದೆಯೆ?

ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್ (ಪ್ರವಾಸೋದ್ಯಮ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು):

ಅ) ಹೌದು.

ಆ) ಹೌದು.

ಇ) ಹೌದು.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಸನ್ಮಾನ್ಯ ಸಭಾಧ್ಯಕ್ಷರೆ, ಬಾಗೇಪಲ್ಲಿ ತಾಲ್ಲೂಕಿನ ಗುಮ್ಮನಾಯಕನ ಪಾಳ್ಯ, ಹಿಂದೆ ಬಾಗೇಪಲ್ಲಿ ತಾಲ್ಲೂಕಿನ ಒಂದು ತಾಲ್ಲೂಕು ಕೇಂದ್ರ ಆಗಿತ್ತು. ವಿಜಯ ನಗರ ಸಾಮ್ರಾಜ್ಯದ ಕಾಲದಲ್ಲಿ ತಾಲ್ಲೂಕು ಕೇಂದ್ರ ಆಗಿತ್ತು. ಈಗ ಅದು ಶಿಥಿಲ ಆಗುವಂತಹ ಪರಿಸ್ಥಿತಿಯಲ್ಲಿ ಇದೆ. ಆದ ಕಾರಣ ಅದನ್ನು ಪ್ರವಾಸೋದ್ಯಮವನ್ನಾಗಿ ಮಾಡಬೇಕು. ಏಕೆಂದರೆ ಅಲ್ಲಿ ಕೋಟೆ, ಕೊತ್ತಲುಗಳು ಇವೆ. ದೇವಸ್ಥಾನಗಳು ಇವೆ. ಅಲ್ಲದೆ ಬಹಳ ಪುರಾತನವಾದಂತಹ, ಬಹಳ ಪ್ರಸಿದ್ಧವಾದಂತಹ ಶಿಲ್ಪಕಲೆಗೆ ಹೆಸರಾದಂತಹ ಕೆತ್ತನೆ ಕೆಲಸಗಳು ಇವೆ. ನನಗೆ ಕೊಟ್ಟಿರುವಂತಹ ಉತ್ತರದಲ್ಲಿ ''ಹೌದು'' ಎಂದು ಹೇಳಿದ್ದಾರೆ, ಅಂದರೆ ಅದನ್ನು ಅಭಿವೃದ್ಧಿ ಪಡಿಸುವುದಕ್ಕೆ ಇದುವರೆಗೂ ಯಾವುದೇ ರೀತಿಯ ಕ್ರಮ ತೆಗೆದುಕೊಂಡಿದ್ದೀರಾ? ಇನ್ನು ಮುಂದೆ

ಯಾವ ರೀತಿ ಕ್ರಮ ತೆಗೆದುಕೊಳ್ಳುತ್ತೀರಾ ಎನ್ನುವುದರ ಬಗ್ಗೆ ಸ್ಪಷ್ಟವಾಗಿ ಹೇಳಬೇಕು ಎಂದು ನಾನು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀಮತಿ ಲೀಲಾದೇವಿ. ಆರ್.ಪ್ರಸಾದ್: ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆಗೆ, ಈಗಾಗಲೇ ನಾವು ಗುಮ್ಮನಾಯಕನ ಹಳ್ಳಿಯನ್ನು 1.6.1997ನೇ ಹೊಸ ಪ್ರವಾಸೋದ್ಯಮ ನೀತಿಯ ಅಡಿಯಲ್ಲಿ ಆ ಹಳ್ಳಿಯನ್ನು 'ಬಿ' ಗುಂಪಿನಲ್ಲಿ ಗುರುತಿಸಿದ್ದೇವೆ. ಅಂದರೆ ಈ ವರ್ಷದ ಪ್ರವಾಸೋದ್ಯಮ ನೀತಿಯಲ್ಲಿ. ಇಲ್ಲಿ ಪ್ರವಾಸ ಸೌಲಭ್ಯವನ್ನು ನಿರ್ಮಿಸುವ ಖಾಸಗಿ ವ್ಯಕ್ತಿಗಳಿಗೆ ಬಂಡವಾಳ ಹೂಡಿಕೆಯ ಮೇಲೆ, 15ರಷ್ಟನ್ನು ಅಂದರೆ 15 ಲಕ್ಷಕ್ಕೆ ಗುರಿ ಮೀರದ ಹಾಗೆ ಮೂರು ವರ್ಷ ಕೊಡುವಂತಹದ್ದು ಹೊಸ ಪ್ರವಾಸೋದ್ಯಮ ನೀತಿಯಲ್ಲಿ ಇದೆ. ಯಾರಾದರೂ ಖಾಸಗಿ ಉದ್ಯಮಿದಾರರು ಬಂದರೆ ಅವರಿಗೆ ಸೌಲಭ್ಯ ದೊರಕುತ್ತಾ ಇದೆ. ಹಾಗೂ ಎಲ್ಲಾ ರೀತಿಯ ವಿನಾಯಿತಿ ಕೊಡುವಂತಹ ವ್ಯವಸ್ಥೆ ಕೂಡ ಇದೆ. ಹೊಸ ಪ್ರವಾಸೋದ್ಯಮ ನೀತಿಯಲ್ಲಿ ಇದನ್ನು ಗುರುತಿಸಿದ್ದೇವೆ. ಪ್ರಸ್ತುತ ಸಾಲಿನಲ್ಲಿ ಗುಮ್ಮನಾಯಕನ ಹಳ್ಳಿ ಪ್ರವಾಸಿ ಸ್ಥಳಕ್ಕೆ ಹೋಗುವ ಸಂಪರ್ಕ ರಸ್ತೆಯ ಅಭಿವೃದ್ಧಿಗೆ ನಾಲ್ಕು ಲಕ್ಷ ತೊಂಬತ್ತೇಳು ಸಾವಿರ ರೂಪಾಯಿಗಳನ್ನು ಜಿಲ್ಲಾಪಂಚಾಯಿತಿಗೆ ಬಿಡುಗಡೆ ಮಾಡಲಾಗಿದೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಖಾಸಗಿ ಅವರಿಗೆ ನಾವು ಪ್ರೋತ್ಸಾಹ ಕೊಟ್ಟು ಅಭಿವೃದ್ಧಿ ಮಾಡುವುದಕ್ಕೆ 15 ಲಕ್ಷ ರೂಪಾಯಿಗಳನ್ನು ಕೊಡುತ್ತೇವೆ ಎಂದು ಹೇಳಿದಿರಿ, ಅಂದರೆ ಅದಕ್ಕೆ ನಿಯಮಾವಳಿಗಳು ಏನು? ಖಾಸಗಿ ವ್ಯಕ್ತಿಗಳು ಸರ್ಕಾರವನ್ನು ಸಂಪರ್ಕಿಸಬೇಕಾದರೆ, ನಿಯಮಾವಳಿಗಳು ಏನು? ಯಾವ ಯಾವ ಆಧಾರದಲ್ಲಿ ಯಾವ ಹಂತದಲ್ಲಿ ಹೇಗೆ ಕೊಡುತ್ತೀರಿ ಎಂಬುದನ್ನು ನಮಗೆ ತಿಳಿಸಬೇಕು.

ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್: ಉದ್ಯಮೆದಾರರು, ಪ್ರವಾಸೋದ್ಯಮದ ಬಗ್ಗೆ ಯಾರಾದರೂ ಮುಂದೆ ಬಂದರೆ, ಅವರಿಗೆ ನಿಯಮಾವಳಿಗಳನ್ನು ತಿಳಿಸುವುದಕ್ಕೋಸ್ಕರ ನಾವು ಈಗಾಗಲೇ ಪುಸ್ತಕವನ್ನು ಪ್ರಿಂಟ್ ಮಾಡಿದ್ದೇವೆ. ಅದರ ಬಗ್ಗೆ ತಮಗೆಲ್ಲರಿಗೂ ವಿವರಣೆ ಬೇಕಾದರೆ ನಾನು ಇಲಾಖೆಯಿಂದ ಕೊಡಿಸುತ್ತೇನೆ. 1997ನೇ ಇಸವಿಯಲ್ಲಿ ಈ ಒಂದು ಹೊಸ ಉದ್ಯಮ ನೀತಿಯ ಪುಸ್ತಕವನ್ನು ಪಬ್ಲಿಷ್ ಮಾಡಿದ್ದೇವೆ. ಇದರ ಅಡಿಯಲ್ಲಿ ಯಾರಾದರೂ ಆಸಕ್ತರಿದ್ದರೆ ಬಂದು ಇಲಾಖೆಯವರನ್ನು ಸಂಪರ್ಕಮಾಡಿ ತೆಗೆದುಕೊಂಡು ಹೋಗಬಹುದು.

ಅಧ್ಯಕ್ಷರು: ಸದಾನಂದ ಗೌಡರೇ, ಈ ಪ್ರಶ್ನೆ ಶ್ರೀ ಜಯರಾಮ ಶೆಟ್ಟರದು, ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ.

ಶ್ರೀ ಡಿ.ವಿ.ಸದಾನಂದಗೌಡ: ಗೊತ್ತಾಯಿತು ಅಧ್ಯಕ್ಷರೆ, ನಾನು ಮೊದಲೇ ಕೇಳಿಕೊಂಡೆ. ಆದರೆ ನನ್ನದು ಒಂದು ವಿನಂತಿ ಇದೆ. ಈ ಸದನದಲ್ಲಿ ನಮ್ಮ ಶಾಸಕರು

ಮಂತ್ರಿಗಳಿಂದ ಭಿಕ್ಷಾಟನೆ ಮಾಡುವುದನ್ನು ನಿಷೇಧ ಮಾಡಬೇಕು. ಏಕೆಂದರೆ, ಪ್ರತಿ ಪ್ರಶ್ನೆ ಕೇಳಿದಾಗಲೂ ಅದು ಹಸ್ತಾಂತರವಾಗಿದೆ, ಇಲ್ಲ ಅಂದರೆ ಉತ್ತರ ಮುಂದೆ ಕೊಡುತ್ತೇವೆ, ಪರಿಶೀಲನೆ ಮಾಡುತ್ತೇವೆ ಎಂದು ಹೇಳುತ್ತಾರೆ. ನಾವು ಭಿಕ್ಷೆ ಬೇಡುವಂತಹ ಪರಿಸ್ಥಿತಿಯಾಗಿದೆ. ಇದು ಭಿಕ್ಷಾಟನೆಗೆ ಸಂಬಂಧಪಟ್ಟ ಒಂದು ಪ್ರಶ್ನೆ. ಈ ಸದನದಲ್ಲಿ ಭಿಕ್ಷಾಟನೆಯನ್ನು ಪ್ರಥಮ ಹಂತದಲ್ಲಿ ನಿಷೇಧ ಮಾಡಬೇಕು ಮಂತ್ರಿಗಳಲ್ಲಿ ನಾವು ಭಿಕ್ಷಾಟನೆಗೆ ಉತ್ತರ ಕೇಳುವಂತಹ ಭಿಕ್ಷೆಯನ್ನು ನಿಲ್ಲಿಸಲು, ತಾವು ಈ ಸಂದರ್ಭದಲ್ಲಿ ನಮ್ಮನ್ನು ರಕ್ಷಣೆ ಮಾಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಪ್ರಾರ್ಥಿಸುತ್ತೇನೆ.

ಅಧ್ಯಕ್ಷರು: ಆಗಬಹುದು. ಭಿಕ್ಷಾಟನೆಯನ್ನು ತಡೆಗಟ್ಟುತ್ತೇವೆ.

ವಿಷಯ: ಗದಗ್‌ನಲ್ಲಿ ಕೆ.ಹೆಚ್.ಪಾಟೀಲ್ ಕ್ರೀಡಾಂಗಣದ ನಿರ್ಮಾಣ ಕೆಲಸ.

514 (3432)

ಶ್ರೀ ಡಿ.ಆರ್.ಪಾಟೀಲ್ (ಗದಗ್): ಮಾನ್ಯ ಯುವಜನ ಸೇವೆ ಮತ್ತು ಕ್ರೀಡಾ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗದಗದಲ್ಲಿ ನಿರ್ಮಾಣವಾಗುತ್ತಿರುವ ಕೆ.ಎಚ್.ಪಾಟೀಲ್ ಕ್ರೀಡಾಂಗಣದ ನಿರ್ಮಾಣ ಕಾರ್ಯವು ಈಗ ಯಾವ ಹಂತದಲ್ಲಿದೆ?

ಆ) ಈ ಕ್ರೀಡಾಂಗಣಕ್ಕೆ ಕೇಂದ್ರ ಸರ್ಕಾರ ರಾಜ್ಯ ಸರ್ಕಾರ ಕೊಡ ಬೇಕಾದ ವಂತಿಕೆ ಎಷ್ಟು? ಇದರಲ್ಲಿ ಈ ಸರ್ಕಾರದಿಂದ ಬಿಡುಗಡೆಯಾದ ಹಣ ಎಷ್ಟು?

ಇ) ಈ ಕ್ರೀಡಾಂಗಣ ನಿರ್ಮಾಣಕ್ಕೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ನೀಡಬೇಕಾದ ಪೂರ್ಣ ಹಣ ಯಾವಾಗ ಬಿಡುಗಡೆ ಮಾಡಲಾಗುವುದು? ಈ ಕುರಿತು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಅಜಯಕುಮಾರ್ ಸರನಾಯಕ್ (ಯುವಜನ ಸೇವೆ ಮತ್ತು ಕ್ರೀಡಾ ರಾಜ್ಯ ಸಚಿವರು):

ಅ) ಗದಗದಲ್ಲಿ ನಿರ್ಮಾಣವಾಗುತ್ತಿರುವ ಕೆ.ಎಚ್.ಪಾಟೀಲ್ ಕ್ರೀಡಾಂಗಣದ ನೆಲ ಸಮತಟ್ಟು ಮಾಡುವ ಕೆಲಸ ಪೂರ್ಣಗೊಂಡಿದೆ. ಪೆವಿಲಿಯನ್ ಕಟ್ಟಡ, ನೆಲಮಹಡಿ, ನಿರ್ಮಾಣ ಪೂರ್ಣ ಗೊಂಡಿದೆ ಹಾಗೂ ಮೊದಲ ಮಹಡಿ ನಿರ್ಮಾಣ ಭಾಗಶಃ ಮುಗಿದಿದೆ.

ಆ) ಈ ಕ್ರೀಡಾಂಗಣಕ್ಕೆ ಕೇಂದ್ರ ಸರ್ಕಾರದಿಂದ ರೂ. 12.00 ಲಕ್ಷಗಳನ್ನು